

ಆಕಾರವನ್ನು ಹೊಂದಿಸಿಕೊಳ್ಳುವ ರಾಜಕೀಯ ಪಕ್ಷ ಅಥವ ಸ್ವತಂತ್ರ ಅಭ್ಯರ್ಥಿ ಸರ್' ಎನ್ನುತ್ತಾ ಪೊಲಿಟಿಕ್ಸ್‌ನತ್ತ ನೆಗೆದ ಸೀನು.

'ಬ್ಯಾಕ್ಟೀರಿಯಾ ಎಂದರೆ?'

'ಬ್ಯಾಕ್ ಡೋರ್ ಆಫ್ ಎ ಕೆಫೆಟೇರಿಯಾ ಅಂತ ಎಲ್ಲೋ ಓದಿದ್ದೆ ಸಾರ್.'

'ಬ್ಯಾಕ್ಟೀರಿಯಾ ಅಂದರೆ ಸೂಕ್ಷ್ಮಜೀವಿಗಳು ಅಲ್ಲವೇನೋ?'

'ನಮ್ಮಂಕಲ್ ಒಪ್ಪಲ್ಲ ಸಾರ್.'

'ಯಾಕೆ? ನಿಮ್ಮಂಕಲ್ ಸೈಂಟಿಸ್ಟ್ ಏನು?'

'ಅಲ್ಲ. ಆದರೆ ಅವನನ್ನ ಕಂಡರೆ ಎಷ್ಟೋ ಪ್ರಯೋಗಶಾಲೆಗಳಿಗೆ ಪಂಚಪ್ರಾಣ.'

'ಅಂತಹ ಸಾಧನೆ ಏನು ಮಾಡಿದ್ದಾರೆ?'

'ಅಲರ್ಜಿ ಸಾರ್! ಒಂದೊಂದು ಸೀಸನ್ನಲ್ಲಿ ಒಂದೊಂದು ಅಲರ್ಜಿ, ಐದಾರು ಲ್ಯಾಬ್‌ಗಳಲ್ಲಿ ಟೆಸ್ಟು! ತೀರ್ಥ ತೊಗೊಂಡ್ರೆ ಉಷ್ಣ, ಮಂಗಳಾರತಿ ತೊಗೊಂಡ್ರೆ ಶೀತ ಅವರಿಗೆ. ಆದ್ದರಿಂದ ಎಲ್ಲರೂ ಅವರನ್ನ ತುಂಬಾ ಸೆನ್ಸಿಟಿವ್, ಸೂಕ್ಷ್ಮ ಅಂತಾರೆ. ಸೂಕ್ಷ್ಮ ಇರೋ ಜೀವಿಯೇ ಸೂಕ್ಷ್ಮಜೀವಿ. ಅವರು ಬ್ಯಾಕ್ಟೀರಿಯಾಗಿಂತ ತುಂಬಾ ತುಂಬಾ ದೊಡ್ಡದಾಗಿದಾರೋದ್ರಿಂದ ಬ್ಯಾಕ್ಟೀರಿಯಾ ಅಂದರೆ ಸೂಕ್ಷ್ಮಜೀವಿ ಅನ್ನೋದನ್ನ ಅವರು ಒಪ್ಪಲ್ಲ.'

'ತೀರ್ಥ ತೊಗೊಂಡ್ರೆ ಶೀತ ಅಂತಲ್ವೇನೋ ಗಾದೆ ಇರೋದು?'

'ಇವರದು ಉಲ್ಟಾ ಸಾರ್. ರಾತ್ರಿ ತೀರ್ಥ ಹಾಕ್ಕೊಂಡು ಬರ್ತಾರೆ. ಆಂಟಿ ನೀರು ಸುರೀತಾರೆ, ಜ್ವರ ಬರತ್ತೆ. ದೇಹದ ಶಾಖ ಏರತ್ತೆ. ಟೆಂಪರೇಚರ್ ಅನ್ನಕ್ಕೆ ಉಷ್ಣ ಅನ್ನೋದು ಸರಿಯಾದ ಪದ ಅಲ್ವಾ ಸಾರ್?' ಮತ್ತೆ ವಿಷಯಾಂತರಿಸಿದ ಸೀನು.



'ಮಂಗಳಾರತಿ ತೊಗೊಂಡ್ರೆ ಶೀತ ಯಾಕೆ?'

'ಸ್ನಾನ ಮಾಡಿ ದಟ್ಟಿ ಸುತ್ಕೊಂಡ್ಬಂದು ಪೂಜೆ ಮಾಡಿ ಮಂಗಳಾರತಿ ತೊಗೊಳ್ಳೋದು ಅವರ ಮನೆಯ ಸಂಪ್ರದಾಯ. ದಟ್ಟಿ ವಿತೌಟ್ ಉತ್ತರೀಯ ಮೀನ್ಸ್ ಎಕ್ಸ್‌ಪೋಸ್ಡ್ ಎದೆ ವಿಚ್ ಅಟ್ರಾಕ್ಟ್ಸ್ ಗಾಳಿ. ವಿಂಡು ವಿತೌಟ್ ವಿಂಡ್‌ಷೀಲ್ಡು ಈಸ್ ಈಕ್ವಲ್ ಟು ಕೋಲ್ಡು...' ಎಂದು ವಿವರಣೆ ನೀಡಿದ ಸೀನು, 'ಅಂಕಲ್ ವಿಷಯ ಬಿಟ್ಟು ಟ್ಯೂಷನ್ ವಿಷಯಕ್ಕೆ ಬನ್ನಿ ಸಾರ್' ಎಂದು ನನ್ನನ್ನು ಟ್ರ್ಯಾಕ್‌ನತ್ತ ಸೆಳೆದ.

ಬಯಾಲಜಿಯನ್ನು ಬಯಲಿಗೆಸೆದು 'ಆಕ್ಸಿಜನ್‌ಗೆ ಓ; ಹೈಡ್ರೋಜನ್‌ಗೆ ಹೆಚ್. ಸೋಡಿಯಮ್ ಕ್ಲೋರೈಡ್‌ಗೆ?' ಎಂದೆ.

'ನಮ್ಮಜ್ಜಿಯ ಬಗ್ಗೆ ನಮ್ಮಮ್ಮ ಆಡಿಕೊಳ್ಳೋ ಮಾತನ್ನ ಜ್ಞಾಪಿಸಿದಿರಿ ಸಾರ್.' ಸೀನು ಮತ್ತೆ ಒಗಟಾದ.

'ಏನಂತ ಆಡ್ಕೋತಾರೋ?' ಗೊಂದಲದ ದನಿ ಹೊರಡಿಸಿದೆ.

'ಅತ್ತೆಯ ಎನ್‌ಎ ಕಡಿಮೆ ಆಗಿದೆ. ಡಾಕ್ಟರ್ ಹತ್ರ ಹೋಗ್ಬೇಕು. ಸಿಎಲ್ ಹಾಕ್ತೀನಿ ಅಂತಾರೆ. ಅಜ್ಜಿಯ ಎನ್‌ಎ ಜೊತೆಗೆ ಅಮ್ಮನ ಸಿಎಲ್ ಸೇರಿಸಿದರೆ ಸೋಡಿಯಮ್ ಕ್ಲೋರೈಡಿನ ಎನ್‌ಎಸಿಎಲ್.'

ಕೊಂಕಣ ಸುತ್ತಿ ಮೈಲಾರಕ್ಕೆ ಬಂದರೂ ಕಡೆಗೂ ಸೀನು ಒಂದು ಸರಿಯಾದ ಉತ್ತರ ನೀಡಿದ್ದ.

'ಓಝೋನ್ ಸಿಂಬಲ್ ಗೊತ್ತಾ?'

'ಅದರ ಪದರ ಹರಿದರೆ ಜಗತ್ತಿನ ಪರಿಸರವೇ ಹಾಳಾಗತ್ತೇಂತ ಟೀವಿಕನ್ನಡದಲ್ಲಿ ಹೇಳೋದೇ ಆ ಸಿಂಬಲ್.'

'ಟೀವಿಕನ್ನಡದಲ್ಲಿಯೇ? ಏನಂತ ಹೇಳ್ತಾರೆ?'

'ಜಗತ್ತಿನ ಪರಿಸರ ಹೋಯಿತೂರೀ ಎನ್ನುವುದನ್ನ ಓತ್ರೀ ಅಂತ ಹೇಳ್ತಿರ್ತಾರೆ. ಓಝೋನ್‌ನ ಸಿಂಬಲ್ ಓ ತ್ರೀ.'

ಮತ್ತೊಮ್ಮೆ ಸರಿಯುತ್ತರ ನೀಡಿ ದಿಗ್ಭ್ರಮೆಗೊಳಿಸಿದ ಸೀನು.

'ಕೆಮಿಸ್ಟ್ರೀಲಿ ಸ್ಟ್ರಾಂಗ್ ಇದ್ದೀಯ ಅನ್ಸತ್ತೆ...' ಮೆಚ್ಚುಗೆಯ ರಾಗ ಎಳೆದೆ.

'ಒಂಟಿ ಹೆಸರುಗಳೇನೋ ಗೊತ್ತು ಸಾರ್. ಆದರೆ ಕಾಂಬಿನೇಷನ್ನೇ ಕಷ್ಟ. ನೀರಿನ ಫಾರ್ಮುಲಾನ ಹೆಚ್‌ಟು ಪ್ಲಸ್ ಓಟು ಈಕ್ವಲ್ಸ್ ಹೆಚ್‌ಟೂಓ ಅಂದರೆ ಬ್ಯಾಲೆನ್ಸ್ಡ್ ಈಕ್ವೇಷನ್ ಆಗಲ್ವಂತೆ, 2 ಹೆಚ್‌ಟು ಪ್ಲಸ್ ಓಟು ಅನ್ಬೇಕಂತೆ. ಇದು ಚುನಾವಣೆಯ ಸಮಯದ ಈಕ್ವೇಷನ್ ಇದ್ದಹಾಗಿದೆ.'

'ಅಂದರೆ?'

'ಎಲೆಕ್ಷನ್ ಸಮಯದಲ್ಲಿ ಹೆಚ್ ಸ್ಟ್ಯಾಂಡ್ಸ್ ಫಾರ್ ಹೆಂಡ; 2 ಹೆಚ್ ಟು ಅಂದರೆ ಎರಡೆರಡು ಪಕ್ಷದವರು ಕೊಡುವ ಎರಡೆರಡು ಹೆಂಡದ ಬಾಟಲು. ಅದನ್ನ ತೊಗೊಂಡವ್ನು ಓಟು ಅಂದರೆ ಮತ ಹಾಕ್ತಾನೆ. ಕಡೆಗೆ ಮಾಡಿದ್ದೆಲ್ಲ ನೀರಿನಲ್ಲಿ ಹೋಮ.' ಇಡೀ ರಾಜಕೀಯ ವ್ಯವಸ್ಥೆಯನ್ನು ಎರಡೇ ಸಾಲಿನಲ್ಲಿ ಮುಂದಿಟ್ಟುಬಿಟ್ಟ ಸೀನು.

ಕೋರ್ ಸಬ್ಜೆಕ್ಟ್ಸ್‌ನಲ್ಲಿ ಕೊರೆಯೇ ಆಗಿರುವ ಇವನ ತಿಳಿವಳಿಕೆ ಭಾಷೆಗಳಲ್ಲಿ ಹೇಗಿದೆ ನೋಡಿಬಿಡೋಣವೆನಿಸಿ, 'ಕನ್ನಡ ಅಕ್ಷರಮಾಲೆಯನ್ನು ನೋಡಿದರೆ ನಿನಗೆ ಏನೆನಿಸುತ್ತದೆ?' ಎಂದೆ.

'ಪೈಥಾಗೊರಸ್ ನಿಯಮ ನೆನಪಾಗುತ್ತದೆ.'

'ಹೇಗೆ?'

'ಹದಿನಾರು ಸ್ವರಗಳಿಗೆ ಒಂಬತ್ತು ಯೋಗವಾಹಗಳನ್ನು ಸೇರಿಸಿದರೆ ಇಪ್ಪತ್ತೈದು ವ್ಯಂಜನಗಳು ಬರುತ್ತವೆ. ತ್ರೀ ಸ್ಕ್ವೇರ್ ಪ್ಲಸ್ ಫೋರ್ ಸ್ಕ್ವೇರ್ ಈಕ್ವಲ್ಸ್ ಫೈವ್ ಸ್ಕ್ವೇರ್. ಇದೇ ಪೈಥಾಗೊರಸ್ ನಿಯಮ.'

'ಇಷ್ಟೆಲ್ಲಾ ಹೇಗೆ ಗೊತ್ತು?'

'ವಾಟ್ಸಪ್ ಮೆಸೇಜಲ್ಲಿ ರಿಪೀಟ್ ಆಗೀ ಆಗೀ ತಲೆಗೆ ಹತ್ತಿದೆ.'

'ಹೈಪಾಟಿನ್ಯೂಸ್ ಅಂದರೆ ಗೊತ್ತಾ ಹಾಗಾದರೆ?'

'ಮೊನ್ನೆ ಟೀವಿಲಿ ನೋಡಿದೆ.'

'ಏನನ್ನ?'

'ಪಾಟಿ ಅಂದರೆ ಮುದುಕಿ. ಫುಲ್ ಟೈಟ್ ಆಗಿ ತೂರಾಡ್ತಿದ್ದ ಮುದುಕಿಯ ಬಗ್ಗೆ ಗಂಟೆಗಟ್ಟಲೆ ನ್ಯೂಸ್ ಉಜ್ತಿದ್ರು.'

ಭಾಷೆಯ ಪ್ರಶ್ನೆ ಕೇಳಲು ತೊಡಗಿದ ನನ್ನನ್ನೇ ದಾರಿ ತಪ್ಪಿಸಿ ಟೀವಿ ನ್ಯೂಸಿನತ್ತ ಒಯ್ದಿದ್ದ ಸೀನು!

ನಾನೀಗ ಅಡಕೊತ್ತಿನಲ್ಲಿ ಸಿಕ್ಕಿರುವ ಅಡಕೆ. ಇವನಿಗೆ ಪಾಠ ಹೇಳಿಕೊಡಲು ಒಪ್ಪಿದರೆ ನನ್ನ ಬುದ್ಧಿಗೇ ಖಗ್ರಾಸ ಗ್ರಹಣ. ಒಪ್ಪದಿದ್ದರೆ ಆರ್ಥಿಕ ಮಹಾಲಯ ಅಮಾವಾಸ್ಯೆ!

ಈ ಇಕ್ಕಟ್ಟಿಗೆ, ಈ ಬಿಕ್ಕಟ್ಟಿಗೆ ನಿಮ್ಮಲ್ಲೇನಾದರೂ ಪರಿಹಾರ ಇದೆಯೆ?

ಪ್ರತಿಕ್ರಿಯಿಸಿ: **feedback@sudha.co.in**